## ದಿನಾಂಕ 05-01-2019ರ ಶನಿವಾರ ಬೆಳಗ್ಗೆ ವಾರ್ಡ್ ಸಂಖ್ಯೆ81 ವಿಜ್ಞಾನನಗರ ವಾರ್ಡಿನ ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರಾದಂತಹ ಶ್ರೀ. ಎಸ್.ಜಿ. ನಾಗರಾಜ್ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:

1. ಶ್ರೀ. ಎಸ್. ಕೃಷ್ಣಪ್ಪ ಸದಸ್ಯರು
2. ಶ್ರೀ. ಸುರೇಂದರ್ ಸದಸ್ಯರು
3. ಶ್ರೀಮತಿ. ಪದ್ಮಾವತಿಯಮ್ಮ ಸದಸ್ಯರು
4. ಶ್ರೀ. ಸಪ್ನ ಕಾರೀಮ್ ಸದಸ್ಯರು
5. ಶ್ರೀ. ಡಾ ಮಲ್ಲಿಕಾರ್ಜುನ್ ಬಸಪ್ರಬು ಸದಸ್ಯರು
7. ಶ್ರೀ. ಸೆಂದಿಲ್ ಕುಮಾರ್ ಸದಸ್ಯರು
8. ಶ್ರೀ. ಎಲ್. ಸುರೇಶ್ ಕಿರಿಯ ಅಭಿಯಂತರರು ವಿಜ್ಞಾನನಗರ
9. ಶ್ರೀ. ರಾಘವೇಂದ್ರ ಹಿರಿಯ ಆರೋಗ್ಯ ಪರಿವೀಕ್ಷಕರು

ಮಾನ್ಯ ಅಧ್ಯಕ್ಷರು ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು, ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- <u>**ಘನ ತ್ಯಾಜ್ಯ ನಿರ್ವಹಣೆ**</u>

  ಡಾ. ಮಲ್ಲಿಕಾರ್ಜುನ ರವರು ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಮಾತನಾಡಿ ಕಸದ ಸಮಸ್ಯೆ ಹಾಗೂ ಸಮರ್ಪಕ ವಿಂಗಡನೆ ವಿಲೇವಾರಿ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ಕೋರಿದರು. ಈ ಬಗ್ಗೆ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು. ಈ ಸಂಕ್ರಾತಿ ಹಬ್ಬದ ಒಳಗಾಗಿ ಪ್ರತೀ ಆಟೋಗೆ ಜನರ ಮಾಹಿತಿಗಾಗಿ ಸಿ.ಡಿ.ಯೊಂದಿಗೆ ಧ್ವನಿವರ್ಧಕಗಳನ್ನು ಅಳವಡಿಸಿ ಪ್ರತೀ ಮನೆಯಿಂದ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವಿಂಗಡಣೆ ಮಾಡಿ ವಿಲೇ ಮಾಡುವಂತೆ ಸೂಚಿಸಲಾಯಿತು.

  ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು

- ಪ್ರತೀ ವಾರ್ಡ್ ಕಮಿಟಿಯ ಸಭೆಗೆ 7 ದಿನ ಮುಂಚಿತವಾಗಿ ವಾರ್ಡ್ ಕಮಿಟಿ ಸದಸ್ಯರುಗಳಿಗೆ ಮಾಹಿತಿ ನೀಡುವಂತೆ ಸೂಚಿಸಲಾಯಿತು. ಮತ್ತು ಸದಸ್ಯರಿಂದ ಮುಂದಿನ ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತು ಅಜೆಂಡಾವನ್ನು ಸಹ ತಯಾರಿಸುವಂತೆ ಸೂಚಿಸಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

Scanned by CamScanner

- ವಾರ್ಡ್ ಕಮಿಟಿ ಸದಸ್ಯರುಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಗುರುತಿನ ಚೀಟಿಯನ್ನು ನೀಡುವ ಕೋರಿದರು ಇದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು. ಪ್ರತೀ ವಾರ್ಡ್ ಕಮಿಟಿ ಸಭೆಯಲ್ಲಿ ವಿವಿಧ ಸಾರ್ವಜನಿಕರ ಹಿತಾಸಕ್ತಿಯ ವಿಷಯಗಳ ಬಗ್ಗೆ ಚರ್ಚೆಯಾಗುತ್ತಿದ್ದು, ಯಾವೊಂದೂ ವಿಷಯಗಳ ಬಗ್ಗೆ ಕ್ರಮ ವಹಿಸುತ್ತಿಲ್ಲವೆಂದು ಹಾಗೂ ಪ್ರತೀ ಸಭೆಗೆ ಎಲ್ಲಾ ಇಲಾಖೆಗಳ ಮುಖ್ಯಸ್ಥರೂ/ಅಧೀನ ಸಿಬ್ಬಂದಿಯನ್ನು ನಿಯೋಜಿಸುವಂತೆ ಕೋರಿದರು.

  ಕ್ರಮ: ವಾರ್ಡ್ ಅಭಿಯಂತರರು

- ಬಸವನಗರ ಬಸ್ ನಿಲ್ದಾಣಕ್ಕೆ ಬಿ.ಎಂ.ಟಿ.ಸಿ. ವ್ಯವಸ್ಥೆಯು ಸರಿಯಾಗಿಲ್ಲವೆಂದು ಸಾರ್ವಜನಿಕರು ದೂರುತ್ತಿರುವುದಾಗಿ ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಮಾರತ್ ಹಳ್ಳಿ, ಬಿ.ಇ.ಎಂ.ಎಲ್ ಬಡಾವಣೆ, ವಿಜ್ಞಾನನಗರ ಮತ್ತು ಎಂ.ಇ.ಜಿ ಬಡಾವಣೆಗಳಿಂದ ಮೆಟ್ರೋ ಸ್ಟೇಷನ್ ಸಂಪರ್ಕ ಸಾಧಿಸಲು ಸಂಬಂಧಿಸಿದ ಸಾರಿಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

- ಬಸವನಗರ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರು ಅಡ್ಡಾದಿಡ್ಡಿಯಾಗಿ ವಾಹನ ನಿಲುಗಡೆ ಮಾಡುತ್ತಿದ್ದು, ಸಾರ್ವಜನಿಕರಿಗೆ ಹಾಗೂ ಬಸ್ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸಂಚಾರ ಪೋಲೀಸ್ ವಿಭಾಗಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಲು ತೀರ್ಮಾನಿಸಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

- ಕೆರೆಯ ಅಂಗಳದಲ್ಲಿ ಕಸ ವಿಂಗಡಣೆ ಮಾಡುವಂತೆ ಸಭೆಯಲ್ಲಿ ಸೂಚಿಸಿದರ ಮೇರೆಗೆ ಆರೋಗ್ಯ ಪರಿವೀಕ್ಷಕರು ಹಸಿರು ನ್ಯಾಯ ಮಂಡಳಿ ಕೇಂದ್ರ ಕಛೇರಿ ದೆಹಲಿ ಇಲ್ಲಿಂದ ಕೆರೆಯ ಸರಹದ್ದಿನಲ್ಲಿ ಯಾವುದೇ ಚಟುವಟಿಕೆಗಳನ್ನು ಮಾಡದಂತೆ ಆದೇಶ ವಿರುವುದರಿಂದ ಕಸವಿಂಗಡಣೆ ಸಮರ್ಪಕವಾಗಿ ಸಾಧ್ಯವಾಗಿರುವುದಿಲ್ಲವೆಂದು ಮಾಹಿತಿ ನೀಡಿದರು

  ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು

- ಕಾಳಪ್ಪ ಬಡಾವಣೆ ಮತ್ತು ವಿಜ್ಞಾನನಗರದ ದಕ್ಷಿಣ ಭಾಗದ ಮತ್ತು ರಾಮಯ್ಯ ರೆಡ್ಡಿ 2ನೇ ಹಂತದಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿದ್ದು, ತುರ್ತಾಗಿ ಸರಿಪಡಿಸುವಂತೆ ಕೋರಲಾಯಿತು. ಮುಂದಿನ ಸಭೆಗೆ ಜಲ ಮಂಡಳಿಯಿಂದ ಅಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಮತ್ತು ಮುಖ್ಯವಾಗಿ ನೀರು ಸರಬರಾಜು ದಾರರನ್ನು ತಪ್ಪದೇ ಸಭೆಗೆ ಹಾಜರಾಗುವಂತೆ ಕೋರಲು ಸೂಚಿಸಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

- ವಿಜ್ಞಾನನಗರ ಜಂಕ್ಷನ್ ನಲ್ಲಿ ಮತ್ತು ಮಹದೇವಪುರ ರಿಂಗ್ ರಸ್ತೆಯ ಬ್ರಿಡ್ಜ್ ಕೆಳಭಾಗದಲ್ಲಿ ಟ್ರಾಫಿಕ್ ಸಿಗ್ನಲ್‌ನ್ನು ಅಳವಡಿಸಿ, ಸಂಚಾರ ವ್ಯವಸ್ಥೆಯನ್ನು ಸುಲಲಿತವಾಗಿ ಇಡುವಂತೆ ಕೋರಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

Scanned by CamScanner

- ವಿಜ್ಞಾನನಗರ 7ನೇ ಮುಖ್ಯ ರಸ್ತೆ ಮತ್ತು 5,6ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿ ವ್ಯವಸ್ಥೆಯು ಸರಿಯಾಗಿ ಇರುವುದಿಲ್ಲವೆಂದು ಅದನ್ನು ಸರಿಪಡಿಸಿಕೊಡುವಂತೆ ಕೋರಲಾಯಿತು.

ಕ್ರಮ: ಸಹಾಯಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ.

- ವಾರ್ಡ್ 81ರ ಕೆಲವು ಪಾರ್ಕ್‌ಗಳಲ್ಲಿ ನೀರಿನ ವ್ಯತ್ಯಯ ಉಂಟಾಗುತ್ತಿದ್ದು, ಬೇಸಿಗೆ ಕಾಲ ಸಮೀಪಿಸುತ್ತಿರುವುದರಿಂದ ನೀರಿನ ಅವಶ್ಯಕತೆಗಾಗಿ ತುರ್ತಾಗಿ ಕೊಳವೆ ಬಾವಿಗಳನ್ನು ಕೊರೆಸುವಂತೆ ಕೋರಲಾಯಿತು.

ಕ್ರಮ: ವಾರ್ಡ್ ಅಭಿಯಂತರರು

- ತಲಕಾವೇರಿ ಬಡಾವಣೆಯಲ್ಲಿ ರಾತ್ರಿಹೊತ್ತು ಕಳ್ಳತನ ಜಾಸ್ತಿಯಾಗುತ್ತಿದ್ದು, ಬೀಟ್ ಪೋಲೀಸ್‌ರನ್ನು ಪ್ರತೀ ದಿನ ರಾತ್ರಿ ಗಸ್ತು ತಿರುಗವಂತೆ ಪೋಲೀಸ್ ಅಧಿಕಾರಿಗಳನ್ನು ಕೋರಲು ಸೂಚಿಸಲಾಯಿತು.

ಕ್ರಮ: ವಾರ್ಡ್ ಅಭಿಯಂತರರು

- ಬೃಂದಾವನಾ ಬಡಾವಣೆಯ ವಿರ್ಲಾ ಮಕ್ಕಳ ಆಟದ ಮೈದಾನ ಮತ್ತು ಪಾರ್ಕನ್ನು ಶುಬ್ರಗೊಳಿಸಿಕೊಡುವಂತೆ ಕೋರಲಾಯಿತು.

ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು

ಸಮಿತಿಯ ಸದಸ್ಯರು ಮಾತನಾಡಿ ವಾರ್ಡ್ ನಂ. 81ರಲ್ಲಿ ಪ್ರಚಲಿತವಾಗಿರುವ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳ ಒಂದು ಸಭೆಯನ್ನು ಆಯೋಜಿಸುವಂತೆ ಮಾನ್ಯ ಅಧ್ಯಕ್ಷರನ್ನು ವಿನಂತಿಸಿದರು

ಕ್ರಮ: ವಾರ್ಡ್ ಅಭಿಯಂತರರು

ಕರಡು ಟಿಪ್ಪಣಿ ಮಾನ್ಯ ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟಿದೆ.

ಕಾರ್ಯದರ್ಶಿಗಳು,
ವಿಜ್ಞಾನನಗರ ವಾರ್ಡ್ ಸಮಿತಿ

ಪ್ರತಿಗಳು:
1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ,ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
3. ಕೌನ್ಸಿಲ್ ಕಾರ್ಯದರ್ಶಿಯವರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಘನ ಅವಗಾಹನೆಗಾಗಿ
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಕೆ.ಆರ್.ಪುರ ವಿಭಾಗ ರವರ ಅವಗಾಹನೆಗಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned by CamScanner